ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ

ಸಿಸಿ ನಂಬರಃ 118/2020

ಫಿಯಾದಿಃ ಸರಕಾರ

– ವಿರುದ್ಧ –

ಆರೋಪಿತರುಃ

1 ಶ್ರೀ ಕಿರಣ ತಂದೆ ಗೋಪಾಲ ನಾಯ್ಕ
ಪ್ರಾಯಃ 27 ವರ್ಷ, ವೃತ್ತಿಃ ವ್ಯಾಪಾರ,
ಸಾಃ ಕೇಣಿ, ಅಂಕೋಲಾ ತಾಲೂಕು

2 ಶ್ರೀ ಪ್ರಶಾಂತ ತಂದೆ ಶಾಂಬಾ ನಾಯ್ಕ
ಪ್ರಾಯಃ 37 ವರ್ಷ, ವೃತ್ತಿಃ ಮೊಬೈಲ್ ರಿಪೇರಿ,
ಸಾಃ ಭಾವಿಕೇರಿ, ಅಂಕೋಲಾ ತಾಲೂಕು

3 ಶ್ರೀ ಅಮರ @ಅಮರನಾಥ ತಂದೆ ಥಾಕು ನಾಯ್ಕ
ಪ್ರಾಯಃ 36 ವರ್ಷ, ವೃತ್ತಿಃ ರೈತಾಬಿ,
ಸಾಃ ಕೇಣಿ, ಅಂಕೋಲಾ ತಾಲೂಕು

4 ಶ್ರೀ ಧನಂಜಯ ತಂದೆ ಶಾಂಬಾ ನಾಯ್ಕ
ಪ್ರಾಯಃ 38 ವರ್ಷ, ವೃತ್ತಿಃ ಗುತ್ತಿಗೆದಾರ,
ಸಾಃ ಭಾವಿಕೇರಿ, ಅಂಕೋಲಾ ತಾಲೂಕು

# <u>ದೋಷಾರೋಪಣೆ</u>

ನಾನು ಪ್ರಶಾಂತ ಬಾದವಾಡಗಿ, ಬಿ.ಎ..,ಎಲ್.ಎಲ್.ಬಿ.,(ಸ್ಪೇ) ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಅಂಕೋಲಾ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಮಾಡುತ್ತಿದ್ದೇನೆ..

ದಿನಾಂಕಃ 12-01-2019 ರಂದು ಬೆಳಿಗ್ಗೆ 11-00 ಗಂಟೆಗೆ ಅಂಕೋಲಾ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಅಂಕೋಲಾ ಶಹರದ ಹೊನ್ನಿಕೇರಿಯಲ್ಲಿ ರಮೇಶ ಪಾನಶಾಪ್ ಎದುರಿನ ರಸ್ತೆಯ ಮೇಲೆ ಆರೋಪಿತರಾದ ನೀವು ಜಮೀನು ವಿಷಯದಲ್ಲಿ ಪಿರ್ಯಾದಿಯ ಕುಟುಂಬದವರೊಂದಿಗೆ ದ್ವೇಷದಿಂದ ಇದ್ದವರು, ಅಪರಾಧ ಮಾಡುವ ಏಕೋದ್ದೇಶದಿಂದ ಪಿರ್ಯಾದಿಯವರಾದ ಸುಭಾಶ ನಾಯ್ಕರವರಿಗೆ ರಸ್ತೆಯ ಮೇಲೆ ಅಡ್ಡಗಟ್ಟಿ ತಡೆದು ನಿಲ್ಲಿಸಿರುತ್ತೀರಿ. ಆದ್ದರಿಂದ ನೀವು ಭಾ.ದಂ.ಸಂ.ಕಲಂ 341 ಸಹಿತ 34 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

ಎರಡನೆಯದಾಗಿ ಅದೇ ದಿನ, ಸ್ಥಳ ಮತ್ತು ಸಮಯದಂದು ಆರೋಪಿತರಾದ ನೀವು ಅಪರಾಧ ಮಾಡುವ ಏಕೊದ್ದೇಶದಿಂದ ಬಂದು ಫಿರ್ಯಾದಿಗೆ '**ನೀನು ಪುರಸಭೆಗೆ ನಮ್ಮ ಮೇಲೆ ದೂರು ನೀಡುತ್ತೀಯಾ**? **ಸುಳಾಮಗನೇ ಆ ಜ್ಯಾಗೆಯು ನಮ್ಮದು ಅದರಲ್ಲಿ ನಾವು ಏನನ್ನಾದರೂ ಮಾಡುತ್ತೇವೆ. ಕೆರೆಗೆ ಹೋಗಲು ರಸ್ತೆ ಇಲ್ಲ ಅದನ್ನು ಕೇಳಲು ನೀನು ಯಾರು**?' ಅಂತಾ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಹಾಗೂ 1 ಮತ್ತು 4 ನೇ ಆರೋಪಿತರು ಜಗಳ ಬಿಡಿಸಲು ಬಂದ 4 ನೇ ಸಾಕ್ಷಿದಾರರಾದ ಶ್ರೀಮತಿ ರೋಹಿಣಿ ಗಂಗಾಧರ ನಾಯ್ಕರವರಿಗೆ '**ರಂಡೆ, ಸೂಳೆ**' ಅಂತಾ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆದ್ದರಿಂದ ನೀವು ಭಾ.ದಂ.ಸಂ.ಕಲಂ 504 ಸಹಿತ 34 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

ಮೂರನೇಯದಾಗಿ ಅದೇ ದಿನ, ಸ್ಥಳ ಮತ್ತು ಸಮಯದಂದು ಆರೋಪಿತರಾದ ನೀವು ಅಪರಾಧ ಮಾಡುವ ಏಕೊದ್ದೇಶದಿಂದ ಬಂದು ಪಿರ್ಯಾದಿಗೆ ಕೈಯಿಂದ ಹೊಡೆದು, 3 ನೇ ಆರೋಪಿತನಾದ ನೀವು ಪಿರ್ಯಾದಿಯ ಮೂಗಿನ ಮೇಲೆ ಕೈ ಮುಷ್ಟಿಯಿಂದ ಪಂಚ್ ಮಾಡಿರುತ್ತೀರಿ ಹಾಗೂ 1 ನೇ ಆರೋಪಿತನಾದ ನೀವು ಪಿರ್ಯಾದಿಯ ಎಡಕ್ಕೆ ತಿರುವಿರುತ್ತೀರಿ. ಮತ್ತು 2 ಮತ್ತು 4 ನೇ ಆರೋಪಿಯಾದ ನೀವು ಪಿರ್ಯಾದಿಗೆ ನೆಲಕ್ಕೆ ಉರುಳಿಸಿ ಕಾಲಿನಿಂದ ತುಳಿಯುತ್ತಿದ್ದಾಗ, ಮೋಟಾರ ಸೈಕಲ್ ಹಿಂಬದಿಯಲ್ಲಿ ಕುಳಿತ ಶ್ರೀಮತಿ ರೋಹಿಣಿ ಗಂಗಾಧರ ನಾಯ್ಕರವರು ತನ್ನ ಮಗನಿಗೆ ಹೊಡೆಯಬೇಡಿ ಅವನನ್ನು ಬಿಟ್ಟುಬಿಡಿ ಅಂತಾ ಕೇಳಿಕೊಂಡಾಗ 1 ಮತ್ತು 4 ನೇ ಆರೋಪಿಯಾದ ನೀವು 4 ನೇ ಸಾಕ್ಷಿದಾರರಿಗೆ ದೂಡಿ ನೆಲಕ್ಕೆ ಕೆಡವಿ, ಕೈಯಿಂದ ಅವರ ಮೈಮೇಲೆ ಮತ್ತು ತಲೆಯ ಮೇಲೆ ಹೊಡೆದಿರುತ್ತೀರಿ. ಆದ್ದರಿಂದ ನೀವು ಭಾ.ದಂ.ಸಂ.ಕಲಂ 323 ಸಹಿತ 34 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

ನಾಲ್ಕನೇಯದಾಗಿ ಅದೇ ದಿನ, ಸ್ಥಳ ಮತ್ತು ಸಮಯದಂದು ಆರೋಪಿತರಾದ ನೀವು ಅಪರಾಧ ಮಾಡುವ ಏಕೊದ್ದೇಶದಿಂದ ಆರೋಪಿತರಾದ ನೀವು ಶ್ರೀಮತಿ ರೋಹಿಣಿ ಗಂಗಾಧರ ನಾಯ್ಕರವರ ಕುತ್ತಿಗೆಗೆ ಕೈ ಹಾಕಿ ಅವರ ಮಾನಭಂಗವಾಗುವ ಸಂಭವವಿದೆ ಎಂದು ತಿಳಿದು ಅಪರಾಧಿಕ ಬಲಪ್ರಯೋಗಿಸಿ ಹಲ್ಲೆ ಮಾಡಿರುತ್ತೀರಿ. ಆದ್ದರಿಂದ ನೀವು ಭಾ.ದಂ.ಸಂ.ಕಲಂ 354 ಸಹಿತ 34 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

ಐದನೇಯದಾಗಿ ಅದೇ ದಿನ, ಸ್ಥಳ ಮತ್ತು ಸಮಯದಂದು ಆರೋಪಿತರಾದ ನೀವು ಪಿರ್ಯಾದಿಯವರಾದ ಸುಭಾಶ ನಾಯ್ಕರವರ ಮೋಟಾರ ಸೈಕಲನ್ನು ರಸ್ತೆಯ ಮೇಲೆ ಕೆಡವಿ ಕಾಲಿನಿಂದ ತುಳಿದು ಹಾನಿ ಮಾಡಿರುತ್ತೀರಿ. ಆದ್ದರಿಂದ ನೀವು ಭಾ.ದಂ.ಸಂ.ಕಲಂ 427 ಸಹಿತ 34 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

ಆರನೇಯದಾಗಿ ಅದೇ ದಿನ, ಸ್ಥಳ ಮತ್ತು ಸಮಯದಂದು ಆರೋಪಿತರಾದ ನೀವು ಅಪರಾಧ ಮಾಡುವ ಏಕೊದ್ದೇಶದಿಂದ ಬಂದು ಸುಭಾಶ ನಾಯ್ಕರವರಿಗೆ ಹಾಗೂ ಶ್ರೀಮತಿ ರೋಹಿಣಿ ಗಂಗಾಧರ ನಾಯ್ಕರವರಿಗೆ '**ಇವತ್ತು ನಿಮಗೆ ಬಿಟ್ಟಿದೇವೆ, ಮತ್ತೆ ನಮ್ಮ ಜ್ಯಾಗೆಯ ತಂಟೆ-ತಕರಾರಕ್ಕೆ ಬಂದರೆ ನಿಮ್ಮ ಕುಟುಂಬದ ಒಬ್ಬರನ್ನಾದರೂ ಕೊಂದು ಹಾಕುತ್ತೇವೆ'** ಅಂತಾ ಜೀವದ ಬೆದರಿಕೆ ಹಾಕಿರುತ್ತೀರಿ. ಆದ್ದರಿಂದ ನೀವು ಭಾ.ದಂ.ಸಂ.ಕಲಂ 506 ಸಹಿತ 34 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

(ಮೇಲಿನ ಅಪರಾಧಗಳನ್ನು ಆರೋಪಿತರಾದ ನೀವು ಇದೇ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮತ್ತು ನನ್ನ ಸಂಜ್ಞೆಯತೆಯಲ್ಲಿ ಮಾಡಿದ್ದರಿಂದ ಸದರಿ ಅಪರಾಧಿಕ ಕಲಂಗಳ ವಿಚಾರಣೆಯನ್ನು ಇದೇ ನ್ಯಾಯಾಲಯದಲ್ಲಿ ನಡೆಯಬೇಕೆಂದು ಈ ಹೊತ್ತು ದಿನಾಂಕಃ 08-08-2022 ರಂದು ಆದೇಶಿಸುತ್ತೇನೆ.)

Sd/-

ಅಂಕೋಲಾ (ಪ್ರಶಾಂತ ಬಾದವಾಡಗಿ)

ದಿನಾಂಕಃ 08-08-2022 ಪ್ರ ದಂ ನ್ಯಾದಂ, ಅಂಕೋಲಾ.

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ**

ಸಿಸಿ ನಂಬರ 118/2020

ಪಿರ್ಯಾದಿಃ ಸರಕಾರ – ವಿರುದ್ಧ – ಆರೋಪಿ 1. ಕಿರಣ ತಂದೆ ಗೋಪಾಲ ನಾಯ್ಕ

ಪ್ರ 1. ಮೇಲೆ ಓದಿ ಹೇಳಲಾದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ

ಪ್ರ 2. ಸದರಿ ದೋಷಾರೋಪಣೆಗೆ ನಿಮ್ಮ ಉತ್ತರವೇನು?

ಉತ್ತರಃ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದ್ದೇನೆಂದು ದೃಢೀಕರಿಸುತ್ತೇನೆ.)

ಅಂಕೋಲಾ (ಪ್ರಶಾಂತ ಬಾದವಾಡಗಿ)

**ದಿನಾಂಕಃ** **ಪ್ರ ದಂ ನ್ಯಾದಂ, ಅಂಕೋಲಾ.**

ಆರೋಪಿಯ ಸಹಿ

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ**

ಸಿಸಿ ನಂಬರ 118/2020

ಪಿರ್ಯಾದಿಃ ಸರಕಾರ – ವಿರುದ್ಧ – ಆರೋಪಿ 2. ಪ್ರಶಾಂತ ತಂದೆ ಶಾಂಬಾ ನಾಯ್ಕ

ಪ್ರ 1. ಮೇಲೆ ಓದಿ ಹೇಳಲಾದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ

ಪ್ರ 2. ಸದರಿ ದೋಷಾರೋಪಣೆಗೆ ನಿಮ್ಮ ಉತ್ತರವೇನು?

ಉತ್ತರಃ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದ್ದೇನೆಂದು ದೃಢೀಕರಿಸುತ್ತೇನೆ.)

ಅಂಕೋಲಾ (ಪ್ರಶಾಂತ ಬಾದವಾಡಗಿ)

**ದಿನಾಂಕಃ** **ಪ್ರ ದಂ ನ್ಯಾದಂ, ಅಂಕೋಲಾ.**

ಆರೋಪಿಯ ಸಹಿ

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ**

ಸಿಸಿ ನಂಬರ 118/2020

ಪಿರ್ಯಾದಿಃ ಸರಕಾರ – ವಿರುದ್ಧ – ಆರೋಪಿ 3. ಅಮರ @ ಅಮರನಾಥ ನಾಯ್ಕ

ಪ್ರ 1. ಮೇಲೆ ಓದಿ ಹೇಳಲಾದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ

ಪ್ರ 2. ಸದರಿ ದೋಷಾರೋಪಣೆಗೆ ನಿಮ್ಮ ಉತ್ತರವೇನು?

ಉತ್ತರಃ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದ್ದೇನೆಂದು ದೃಢೀಕರಿಸುತ್ತೇನೆ.)

ಅಂಕೋಲಾ (ಪ್ರಶಾಂತ ಬಾದವಾಡಗಿ)

**ದಿನಾಂಕಃ** **ಪ್ರ ದಂ ನ್ಯಾದಂ, ಅಂಕೋಲಾ.**

ಆರೋಪಿಯ ಸಹಿ

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ**

ಸಿಸಿ ನಂಬರ 118/2020

ಪಿರ್ಯಾದಿಃ ಸರಕಾರ – ವಿರುದ್ಧ – ಆರೋಪಿ 4. ಧನಂಜಯ ತಂದೆ ಶಾಂಬಾ ನಾಯ್ಕ

ಪ್ರ 1. ಮೇಲೆ ಓದಿ ಹೇಳಲಾದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ

ಪ್ರ 2. ಸದರಿ ದೋಷಾರೋಪಣೆಗೆ ನಿಮ್ಮ ಉತ್ತರವೇನು?

ಉತ್ತರಃ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದ್ದೇನೆಂದು ದೃಢೀಕರಿಸುತ್ತೇನೆ.)

ಅಂಕೋಲಾ (ಪ್ರಶಾಂತ ಬಾದವಾಡಗಿ)

**ದಿನಾಂಕಃ** **ಪ್ರ ದಂ ನ್ಯಾದಂ, ಅಂಕೋಲಾ.**

ಆರೋಪಿಯ ಸಹಿ